# ಕರ್ನಾಟಕ ಸರ್ಕಾರದ ನಡವಳಿಗಳು.

**ವಿಷಯ:** ಶ್ರೀಮತಿ ಚಂದ್ರವ್ವಾ ಮಾರುತಿ ಬಂಡಿವಡ್ಡರ, ಅಧ್ಯಕ್ಷರು, ಹಣಮಸಾಗರ ಗ್ರಾಮ ಪಂಚಾಯತಿ, ರಾಮದುರ್ಗ ತಾಲ್ಲೂಕು, ಬೆಳಗಾವಿ ಜಿಲ್ಲೆ ಇವರ ವಿರುದ್ಧ ಕರ್ನಾಟಕ ಗ್ರಾಮ ಸ್ವರಾಜ್ ಮತ್ತು ಪಂಚಾಯತ್ ರಾಜ್ ಅಧಿನಿಯಮ, 1993 ರ ಪ್ರಕರಣ 48(4) ಮತ್ತು 43(ಎ) ರನ್ವಯ ಕ್ರಮ ಜರುಗಿಸುವ ಬಗ್ಗೆ.

**ಓದಲಾಗಿದೆ:**

1) ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳು, ಬೆಳಗಾವಿ ಜಿಲ್ಲಾ ಪಂಚಾಯತಿ, ಬೆಳಗಾವಿ ಇವರ ಪತ್ರ ಸಂಖ್ಯೆ: ಜಿಪಂಬೆ/ಪರಿಷತ್/ವಿವ/ನೇರ/2017-18, ದಿನಾಂಕ 16.11.2017
2) ಇದೇ ಸಮಸಂಖ್ಯೆಯ ಕಾರಣ ಕೇಳುವ ನೋಟಿಸ್, ದಿನಾಂಕ 13.12.2017
3) ಶ್ರೀಮತಿ ಚಂದ್ರವ್ವಾ ಮಾರುತಿ ಬಂಡಿವಡ್ಡರ, ಅಧ್ಯಕ್ಷರು, ಹಣಮಸಾಗರ ಗ್ರಾಮ ಪಂಚಾಯತಿ, ರಾಮದುರ್ಗ ತಾಲ್ಲೂಕು, ಬೆಳಗಾವಿ ಜಿಲ್ಲೆ ಇವರು ಕಾರಣ ಕೇಳಿ ನೋಟೀಸಿಗೆ ಸಲ್ಲಿಸಿರುವ ಲಿಖಿತ ಹೇಳಿಕೆ; ದಿನಾಂಕ 06.01.2018
4) ಇದೇ ಸಮಸಂಖ್ಯೆಯ ವಿಚಾರಣೆಗೆ ಹಾಜರಾಗಲು ತಿಳುವಳಿಕೆ ಪತ್ರ, ದಿನಾಂಕ 06.02.2018

**<u>ಪ್ರಸ್ತಾವನೆ:</u>**

ಮೇಲೆ ಓದಲಾದ (1) ರಲ್ಲಿ, ಬೆಳಗಾವಿ ಜಿಲ್ಲೆ ರಾಮದುರ್ಗ ತಾಲ್ಲೂಕು, ಹಣಮಸಾಗರ ಗ್ರಾಮ ಪಂಚಾಯತಿ ಎಸ್ಕ್ರೋ ಖಾತೆಗೆ (ರಾಮದುರ್ಗ ಸ್ಟೇಟ್ ಬ್ಯಾಂಕ್ ಆಫ್ ಮೈಸೂರು ಖಾತೆ ಸಂಖ್ಯೆ: 64186591016) ಜಮೆಯಾದ ಮೊತ್ತದಲ್ಲಿ ರೂ.89,440/- ಗಳನ್ನು, ಗ್ರಾಮ ಪಂಚಾಯತಿಯ ಅಂದಿನ ಕಾರ್ಯದರ್ಶಿಯಾದ ಶ್ರೀ ಎಸ್.ಎಸ್.ಕಂಬಿಯವರ (ಪ್ರಸ್ತುತ ನಿವೃತ್ತ) ಹಾಗೂ ಹಣಮಸಾಗರ ಗ್ರಾಮ ಪಂಚಾಯತಿ ಅಧ್ಯಕ್ಷರಾದ ಶ್ರೀಮತಿ ಚಂದ್ರವ್ವಾ ಮಾರುತಿ ಬಂಡಿವಡ್ಡರ ಇವರುಗಳು ದಿನಾಂಕ 19.05.2016 ಹಾಗೂ 24.05.2017 ರಂದು ಅನಧಿಕೃತವಾಗಿ ತಮ್ಮ ಸ್ವಂತ ಕೆಲಸಕ್ಕೆ ಬಳಸಿಕೊಂಡಿರುವುದು ಕಂಡುಬಂದಿರುವ ಹಿನ್ನೆಲೆಯಲ್ಲಿ ಸದರಿಯವರ ವಿರುದ್ಧ ಕಟಕೋಳ ಪೋಲಿಸ್ ಠಾಣೆಯಲ್ಲಿ ಕ್ರಿಮಿನಲ್ ಪ್ರಕರಣ ದಾಖಲಿಸಲಾಗಿದೆ. ಈ ಹಿನ್ನೆಲೆಯಲ್ಲಿ ಹಣಮಸಾಗರ ಗ್ರಾಮ ಪಂಚಾಯತಿ ಅಧ್ಯಕ್ಷರಾದ ಶ್ರೀಮತಿ ಚಂದ್ರವ್ವಾ ಮಾರುತಿ ಬಂಡಿವಡ್ಡರ ಇವರ ವಿರುದ್ಧ ಕರ್ನಾಟಕ ಗ್ರಾಮ ಸ್ವರಾಜ್ ಮತ್ತು ಪಂಚಾಯತ್ ರಾಜ್ ಅಧಿನಿಯಮ, 1993 ರ ಪ್ರಕರಣ 48(4) ಮತ್ತು 43(ಎ) ರನ್ವಯ ಸೂಕ್ತ ಕ್ರಮ ಜರುಗಿಸಲು ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳು, ಬೆಳಗಾವಿ ಜಿಲ್ಲಾ ಪಂಚಾಯತಿ ಇವರು ಸರ್ಕಾರಕ್ಕೆ ಪ್ರಸ್ತಾವನೆ ಸಲ್ಲಿಸಿರುತ್ತಾರೆ.

ಮೇಲೆ ಓದಲಾದ (2) ರಲ್ಲಿ ಕರ್ನಾಟಕ ಗ್ರಾಮ ಸ್ವರಾಜ್ ಮತ್ತು ಪಂಚಾಯತ್ ರಾಜ್ ಅಧಿನಿಯಮ, 1993 ರ ಪ್ರಕರಣ 48(4) ಮತ್ತು 43(ಎ) ರನ್ವಯ ಕ್ರಮ ಜರುಗಿಸಿ, ಗ್ರಾಮ ಪಂಚಾಯತಿ ಅಧ್ಯಕ್ಷ ಮತ್ತು ಸದಸ್ಯ ಸ್ಥಾನದಿಂದ ಏಕೆ ತೆಗೆದು ಹಾಕಬಾರದು ಎಂಬುದರ ಬಗ್ಗೆ ವಿವರಣೆ ನೀಡುವಂತೆ ಶ್ರೀಮತಿ ಚಂದ್ರವ್ವಾ ಮಾರುತಿ ಬಂಡಿವಡ್ಡರ, ಅಧ್ಯಕ್ಷರು, ಹಣಮಸಾಗರ ಗ್ರಾಮ ಪಂಚಾಯತಿ, ರಾಮದುರ್ಗ ತಾಲ್ಲೂಕು, ಬೆಳಗಾವಿ ಜಿಲ್ಲೆ ಇವರಿಗೆ ಕಾರಣ ಕೇಳುವ ನೋಟೀಸನ್ನು ಜಾರಿಗೊಳಿಸಲಾಗಿತ್ತು.

ಮೇಲೆ ಓದಲಾದ (3) ರಲ್ಲಿ ಸದರಿ ಗ್ರಾಮ ಪಂಚಾಯತಿ ಅಧ್ಯಕ್ಷರು ಸರ್ಕಾರದಿಂದ ಜಾರಿಗೊಳಿಸಲಾಗಿದ್ದ ಕಾರಣ ಕೇಳಿ ನೋಟಿಸಿಗೆ ಕೆಳಗಿನಂತೆ ಉತ್ತರವನ್ನು ಸಲ್ಲಿಸಿರುತ್ತಾರೆ.

1. ಹಣಮಸಾಗರ ಗ್ರಾಮ ಪಂಚಾಯತಿ ಎಸ್ಕ್ರೋ ಖಾತೆಗೆ (ರಾಮದುರ್ಗ ಸ್ಟೇಟ್ ಬ್ಯಾಂಕ್ ಆಫ್ ಮೈಸೂರು ಖಾತೆ ಸಂಖ್ಯೆ: 64186591016) ಜಮೆಯಾದ ಮೊತ್ತದಲ್ಲಿ ರೂ.89,440/- ಗಳನ್ನು ಮಾನ್ಯ ಶಾಸಕರ ಅನುದಾನದಡಿಯಲ್ಲಿ ತೆಗೆಯಲಾದ ಕೊಳವೆ ಬಾವಿಗೆ ಅಗತ್ಯ ಪಂಪು-ಮೋಟಾರು ಇನ್ನಿತರೆ ಸಾಮಗ್ರಿಗಳನ್ನು ಖರೀದಿ ಮಾಡಲು ಬಳಕೆ ಮಾಡಲಾಗಿರುತ್ತದೆ.
2. ಸದರಿ ಸಾಮಗ್ರಿಗಳನ್ನು ಮುನವಳ್ಳಿ ಗ್ರಾಮದ ಸೋಳಂಕಿ ಎಲೆಕ್ಟ್ರಿಕಲ್ ಮತ್ತು ಹಾರ್ಡ್‌ವೇರ್ ಅಂಗಡಿಯಿಂದ ಖರೀದಿಸಿ ರಸೀದಿಗಳನ್ನು ಪಡೆದುಕೊಂಡು, ಗ್ರಾಮ ಪಂಚಾಯತಿ ಕಾರ್ಯದರ್ಶಿಯವರಿಗೆ ನೀಡಲಾಗಿದೆ.
3. ಶಿವಾನಂದ ಕಾಡಪ್ಪಾ ಪಾಟೀಲ ಎಂಬುವವರು ಕಟಕೋಳ ಪೋಲಿಸ್ ಠಾಣೆಯಲ್ಲಿ ದಿನಾಂಕ 11.09.2017 ರಂದು ಅಪರಾಧ ಸಂಖ್ಯೆ: 192/2017 ರಲ್ಲಿ ಫಿರ್ಯಾದು ದಾಖಲಿಸಿದ್ದು, ಸತ್ಯಕ್ಕೆ ದೂರವಾಗಿರುತ್ತದೆ. ಈ ಕ್ರಿಮಿನಲ್ ಪ್ರಕರಣದಲ್ಲಿ ಜಾಮೀನು ದೊರೆತಿದ್ದು, ಪ್ರಕರಣವು ವಿಚಾರಣಾ ಹಂತದಲ್ಲಿರುತ್ತದೆ.
4. ಆರೋಪಗಳನ್ನು ಅಲ್ಲಗಳೆಯುತ್ತಾ, ಪ್ರಕರಣವು ನ್ಯಾಯಾಲಯದಲ್ಲಿ ಇರುವುದರಿಂದ ಪ್ರಕರಣ 43ಎ ಕ್ರಮವು ತಮ್ಮ ಅಧಿಕಾರ ವ್ಯಾಪ್ತಿಗೆ ಬರುವುದಿಲ್ಲ. ಆದ್ದರಿಂದ ನೋಟೀಸನ್ನು ಹಿಂಪಡೆದುಕೊಂಡು ಕರ್ತವ್ಯ ಮಾಡಲು ಅಡೆತಡೆ ಮಾಡಕೂಡದು ಎಂದು ವಿನಂತಿಸಿರುತ್ತಾರೆ.

ಮೇಲೆ ಒದಲಾದ (4) ರನ್ವಯ, ಶ್ರೀಮತಿ ಚಂದ್ರವ್ವಾ ಮಾರುತಿ ಬಂಡಿವಡ್ಡರ, ಅಧ್ಯಕ್ಷರು, ಹಣಮಸಾಗರ ಗ್ರಾಮ ಪಂಚಾಯತಿ, ರಾಮದುರ್ಗ ತಾಲ್ಲೂಕು, ಬೆಳಗಾವಿ ಜಿಲ್ಲೆ ಇವರ ಪ್ರಕರಣಕ್ಕೆ ಸಂಬಂಧಿಸಿದಂತೆ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಪ್ರಧಾನ ಕಾರ್ಯದರ್ಶಿ(ಪಂ.ರಾಜ್)ಯವರ ನ್ಯಾಯಾಲಯದಲ್ಲಿ ದಿನಾಂಕ 17.02.2018 ರಂದು ವಿಚಾರಣೆ ಜರುಗಿಸಲಾಗಿದೆ. ಸದರಿ ಗ್ರಾಮ ಪಂಚಾಯತಿ ಅಧ್ಯಕ್ಷರು, ಪಂಚಾಯತಿ ಅಭಿವೃದ್ಧಿ ಅಧಿಕಾರಿ ಹಾಜರಾಗಿರುತ್ತಾರೆ. ಪಂಚಾಯತಿ ಅಭಿವೃದ್ಧಿ ಅಧಿಕಾರಿಯು ಹಣಮಸಾಗರ ಗ್ರಾಮ ಪಂಚಾಯತಿಯ ಎಸ್ಕ್ರೋ ಬ್ಯಾಂಕ್ ಖಾತೆ ಸಂಖ್ಯೆ 64186591016 ಯ ಬ್ಯಾಂಕ್ ಸ್ಟೇಟ್‌ಮೆಂಟ್ ಹಾಜರುಪಡಿಸಿದ್ದು, ಪರಿಶೀಲಿಸಲಾಗಿ, ದಿನಾಂಕ 19.05.2016 ರಂದು ರೂ.44,440/- ಗಳನ್ನು ಸ್ವಂತಕ್ಕೆ ಮತ್ತು ದಿನಾಂಕ 24.05.2017 ರಂದು ರೂ.45,000/- ಗಳನ್ನು ಅಧ್ಯಕ್ಷರ ಪತಿಯವರಾದ ಶ್ರೀ ಮಾರುತಿ ಬಿ.ಬಂಡಿವಡ್ಡರ ರವರ ಹೆಸರಿಗೆ ಡ್ರಾ ಮಾಡಿ, ಒಟ್ಟು ರೂ. ರೂ.89,440/- ಗಳನ್ನು ದುರುಪಯೋಗಪಡಿಸಿಕೊಂಡಿರುವುದು ಕಂಡುಬರುತ್ತದೆ. ಸದರಿ ಅವಧಿಯಲ್ಲಿ ಕಾರ್ಯನಿರ್ವಹಿಸುತ್ತಿದ್ದ ನಿವೃತ್ತ ಕಾರ್ಯದರ್ಶಿಯಾದ ಶ್ರೀ ಎಸ್.ಎಸ್.ಕಂಬಿಯವರ ಮತ್ತು ಆಪಾದಿತ ಅಧ್ಯಕ್ಷರ ವಿರುದ್ಧ ಕಟಕೋಳ ಪೋಲಿಸ್ ಠಾಣೆಯಲ್ಲಿ ಕ್ರಿಮಿನಲ್ ಪ್ರಕರಣ ದಾಖಲಿಸಲಾಗಿದೆ.

ಸರ್ಕಾರವು ರಾಜ್ಯದ ಎಲ್ಲಾ ಗ್ರಾಮ ಪಂಚಾಯತಿಗಳಲ್ಲಿ ಸರ್ಕಾರವು ಲಭ್ಯವಿರುವ ಎಲ್ಲಾ ಸಾಕ್ಷ್ಯಾಧಾರಗಳು, ದಾಖಲಾತಿಗಳು, ಆಪಾದಿತರ ಲಿಖಿತ ಹೇಳಿಕೆಗಳನ್ನು ಪರಿಶೀಲಿಸಿ, ಶ್ರೀಮತಿ ಚಂದ್ರವ್ವಾ ಮಾರುತಿ ಬಂಡಿವಡ್ಡರ, ಅಧ್ಯಕ್ಷರು, ಹಣಮಸಾಗರ ಗ್ರಾಮ ಪಂಚಾಯತಿ, ರಾಮದುರ್ಗ ತಾಲ್ಲೂಕು, ಬೆಳಗಾವಿ ಜಿಲ್ಲೆ ಇವರು ಹಣಮಸಾಗರ ಗ್ರಾಮ ಪಂಚಾಯತಿಯ ಎಸ್ಕ್ರೋ ಬ್ಯಾಂಕ್ ಖಾತೆಯಿಂದ ರೂ. ರೂ.89,440/- ಗಳನ್ನು ತಮ್ಮ ಸ್ವಂತಕ್ಕೆ ಡ್ರಾ ಮಾಡಿಕೊಂಡು, ಸರ್ಕಾರದ ಹಣವನ್ನು ದುರುಪಯೋಗ ಪಡಿಸಿಕೊಂಡು ದುರ್ನಡತೆ ಹಾಗೂ ಕರ್ತವ್ಯ ಲೋಪ ಎಸಗಿರುವ ಹಿನ್ನೆಲೆಯಲ್ಲಿ, ಸದರಿಯವರನ್ನು ಹಣಮಸಾಗರ ಗ್ರಾಮ ಪಂಚಾಯತಿ ಅಧ್ಯಕ್ಷ ಸ್ಥಾನದಿಂದ ವಜಾಗೊಳಿಸಿ, ಸದರಿಯವರ ಸದಸ್ಯತ್ವವನ್ನು ರದ್ದುಗೊಳಿಸಲು ಸರ್ಕಾರವು ನಿರ್ಣಯಿಸಿದೆ. ಅದರಂತೆ ಈ ಆದೇಶ.

**<u>ಸರ್ಕಾರದ ಆದೇಶ ಸಂಖ್ಯೆ: ಗ್ರಾಅಪ 1328 ಗ್ರಾಪಂಅ 2017 ಬೆಂಗಳೂರು, ದಿನಾಂಕ: 06.04.2018</u>**

ಮೇಲ್ಕಂಡ ಅಂಶಗಳ ಹಿನ್ನೆಲೆಯಲ್ಲಿ, ಶ್ರೀಮತಿ ಚಂದ್ರವ್ವಾ ಮಾರುತಿ ಬಂಡಿವಡ್ಡರ, ಅಧ್ಯಕ್ಷರು, ಹಣಮಸಾಗರ ಗ್ರಾಮ ಪಂಚಾಯತಿ, ರಾಮದುರ್ಗ ತಾಲ್ಲೂಕು, ಬೆಳಗಾವಿ ಜಿಲ್ಲೆ ಇವರು ಹಣಮಸಾಗರ ಗ್ರಾಮ ಪಂಚಾಯತಿಯ ಎಸ್ಕ್ರೋ ಬ್ಯಾಂಕ್ ಖಾತೆಯಿಂದ ರೂ.89,440/- ಗಳನ್ನು ತಮ್ಮ ಸ್ವಂತಕ್ಕೆ ಡ್ರಾ ಮಾಡಿಕೊಂಡು, ಸರ್ಕಾರದ ಹಣವನ್ನು ದುರುಪಯೋಗ ಪಡಿಸಿಕೊಂಡು ದುರ್ನಡತೆ ಹಾಗೂ ಕರ್ತವ್ಯ ಲೋಪ ಎಸಗಿರುವ ಹಿನ್ನೆಲೆಯಲ್ಲಿ, ಸದರಿಯವರ ವಿರುದ್ಧ ಕರ್ನಾಟಕ ಗ್ರಾಮ ಸ್ವರಾಜ್ ಮತ್ತು ಪಂಚಾಯತ್ ರಾಜ್ ಅಧಿನಿಯಮ, 1993 ರ ಪ್ರಕರಣ 43ಎ & 48(4) ರನ್ವಯ ಕ್ರಮ ಜರುಗಿಸಿ; ಬೆಳಗಾವಿ ಜಿಲ್ಲೆ, ರಾಮದುರ್ಗ ತಾಲ್ಲೂಕು, ಹಣಮಸಾಗರ ಗ್ರಾಮ ಪಂಚಾಯತಿಯ ಅಧ್ಯಕ್ಷ ಸ್ಥಾನದಿಂದ ವಜಾಗೊಳಿಸಿ, ಸದರಿಯವರ ಸದಸ್ಯತ್ವವನ್ನು ತಕ್ಷಣದಿಂದ ಜಾರಿಗೆ ಬರುವಂತೆ ರದ್ದುಗೊಳಿಸಿ ಆದೇಶಿಸಿದೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ
ಮತ್ತು ಅವರ ಹೆಸರಿನಲ್ಲಿ

6/4/18

(ಮುಬಾರಕ್ ಅಹ್ಮದ್)
ಉಪನಿರ್ದೇಶಕರು ಹಾಗೂ ಪದನಿಮಿತ್ತ
ಸರ್ಕಾರದ ಅಧೀನ ಕಾರ್ಯದರ್ಶಿ,
ಗ್ರಾಮೀಣಾಭಿವೃದ್ಧಿ ಮತ್ತು ಪಂ.ರಾಜ್ ಇಲಾಖೆ.

<u>ಪ್ರತಿ:</u>

1) ಜಿಲ್ಲಾಧಿಕಾರಿಗಳು, ಬೆಳಗಾವಿ ಜಿಲ್ಲೆ.
2) ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ, ಬೆಳಗಾವಿ ಜಿಲ್ಲಾ ಪಂಚಾಯತಿ, ಬೆಳಗಾವಿ.
3) ಕಾರ್ಯನಿರ್ವಾಹಕ ಅಧಿಕಾರಿ, ರಾಮದುರ್ಗ ತಾಲ್ಲೂಕು ಪಂಚಾಯತಿ, ರಾಮದುರ್ಗ, ಬೆಳಗಾವಿ ಜಿಲ್ಲೆ.
   (ಸದರಿಯವರಿಗೆ ಆದೇಶದ ಪ್ರತಿಯನ್ನು ತಲುಪಿಸಿ, ಸ್ವೀಕೃತಿಯನ್ನು ಸರ್ಕಾರಕ್ಕೆ ಕಳುಹಿಸಲು ತಿಳಿಸಿದೆ)
4) ಶ್ರೀಮತಿ ಚಂದ್ರವ್ವಾ ಮಾರುತಿ ಬಂಡಿವಡ್ಡರ, ಅಧ್ಯಕ್ಷರು, ಹಣಮಸಾಗರ ಗ್ರಾಮ ಪಂಚಾಯತಿ, ರಾಮದುರ್ಗ ತಾಲ್ಲೂಕು, ಬೆಳಗಾವಿ ಜಿಲ್ಲೆ
5) ಪಂಚಾಯತಿ ಅಭಿವೃದ್ಧಿ ಅಧಿಕಾರಿ, ಹಣಮಸಾಗರ ಗ್ರಾಮ ಪಂಚಾಯತಿ, ರಾಮದುರ್ಗ ತಾ., ಬೆಳಗಾವಿ ಜಿಲ್ಲೆ.
6) ಗಣಕ ಕೋಶ – ಇಲಾಖಾ ವೆಬ್‌ಸೈಟ್‌ನಲ್ಲಿ ಪ್ರಕಟಿಸಲು.
7) ಹೆಚ್ಚುವರಿ ಪ್ರತಿ.

<u>ಪ್ರತಿಯನ್ನು ಮಾಹಿತಿಗಾಗಿ:</u>

1) ಮಾನ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರ ಆಪ್ತ ಕಾರ್ಯದರ್ಶಿ, ವಿಧಾನ ಸೌಧ, ಬೆಂಗಳೂರು.
2) ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು(ಪಂ.ರಾಜ್), ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ ಇವರ ಆಪ್ತ ಕಾರ್ಯದರ್ಶಿ, ಬಹುಮಹಡಿಗಳ ಕಟ್ಟಡ, ಬೆಂಗಳೂರು.
3) ನಿರ್ದೇಶಕರು(ಪಂ.ರಾಜ್-1), ಗ್ರಾ.ಅ. ಮತ್ತು ಪಂ.ರಾಜ್ ಇಲಾಖೆ ಇವರ ಆಪ್ತ ಸಹಾಯಕರು.